ನಿಮ್ಮೊಡನೆ

# ‘ಅಭಿವೃದ್ಧಿ’ಗೆ ಬೇಕಿದೆ ವೇಗೋತ್ಕರ್ಷ

ಭಾರತದ ಮಟ್ಟಿಗೆ ‘ಮಾನವ ಅಭಿವೃದ್ಧಿ ಸೂಚ್ಯಂಕ’ ನಿರಾಶೆ ಹುಟ್ಟಿಸುವಂತಿದ್ದರೂ, ಈ ಅಧ್ಯಯನದಲ್ಲಿ ಕೆಲವು ಆಶಾದಾಯಕ ಅಂಶಗಳೂ ಇವೆ. ಸಾಮಾಜಿಕ ಅನಭಿವೃದ್ಧಿಯ ಆತಂಕ ಭಾರತಕ್ಕೆ ಸೀಮಿತವಾದುದೇನೂ ಅಲ್ಲ.

ಪ್ರಧಾನಿ ನರೇಂದ್ರ ಮೋದಿ ನಾಯಕತ್ವದಲ್ಲಿ ಭಾರತ ವಿಶ್ವದ ಪ್ರಬಲ ಶಕ್ತಿಯಾಗಿ ಹೊರಹೊಮ್ಮುತ್ತಿದೆ ಎನ್ನುವ ಅಭಿಪ್ರಾಯ ಬಲಗೊಳ್ಳುತ್ತಿರುವ ಸಂದರ್ಭದಲ್ಲಿ ಪ್ರಕಟಗೊಂಡಿರುವ ವಿಶ್ವಸಂಸ್ಥೆಯ 2015ರ ‘ಮಾನವ ಅಭಿವೃದ್ಧಿ ಸೂಚ್ಯಂಕ ಪಟ್ಟಿ’ ನಮ್ಮ ಅಭಿವೃದ್ಧಿಯ ಹೇಳಿಕೆಗಳನ್ನು ವಿಮರ್ಶೆಗೊಡ್ಡಲು ಒತ್ತಾಯಿಸುವಂತಿದೆ. ವಿಶ್ವದ 189 ದೇಶಗಳಲ್ಲಿ ಸಮೀಕ್ಷೆ ನಡೆಸಿ ಸಿದ್ಧಪಡಿಸಲಾಗಿರುವ ಪಟ್ಟಿಯಲ್ಲಿ ಭಾರತ 131ನೇ ಸ್ಥಾನ ಪಡೆದಿದೆ. ಮಾನವ ಅಭಿವೃದ್ಧಿಗೆ ತಕ್ಕಂತೆ ಉತ್ತಮ, ಮಧ್ಯಮ ಹಾಗೂ ಕೆಳಹಂತ ಎನ್ನುವ ಮೂರು ಗುಂಪುಗಳಲ್ಲಿ ದೇಶಗಳನ್ನು ವಿಂಗಡಿಸಲಾಗಿದ್ದು, ಈ ವಿಂಗಡಣೆಯ ಪ್ರಕಾರ ಭಾರತ ‘ಮಧ್ಯಮ ಸಾಧನೆ’ ಮಾಡಿರುವ ದೇಶಗಳ ಸಾಲಿನಲ್ಲಿದೆ.

ಭಾರತಕ್ಕಿಂತಲೂ ಶ್ರೀಲಂಕಾ (73) ಹಾಗೂ ಮಾಲ್ಡೀವ್ಸ್ (105) ಉತ್ತಮ ಹಂತದಲ್ಲಿವೆ. ವಿಶ್ವದ ಪ್ರಬಲ ಆರ್ಥಿಕ ಶಕ್ತಿಗಳಲ್ಲೊಂದಾದ ಚೀನಾ 90ನೇ ಸ್ಥಾನದಲ್ಲಿರುವುದು ಗಮನಾರ್ಹ. ಉಳಿದಂತೆ ನೆರೆಯ ಭೂತಾನ್ (132), ಬಾಂಗ್ಲಾ (139) ದೇಶಗಳು ಭಾರತದ ಸನಿಹದಲ್ಲೇ ಇದ್ದರೆ, ಪಾಕಿಸ್ತಾನ 147ನೇ ಸ್ಥಾನದಲ್ಲಿದೆ. ನಾರ್ವೆ ದೇಶ ಶ್ರೇಯಾಂಕ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದು, ನಂತರದ ಸ್ಥಾನಗಳಲ್ಲಿ ಆಸ್ಟ್ರೇಲಿಯಾ, ಸ್ವಿಟ್ಜರ್ಲೆಂಡ್, ಜರ್ಮನಿ ಹಾಗೂ ಡೆನ್ಮಾರ್ಕ್ ಇವೆ.

ಭಾರತದ ಮಟ್ಟಿಗೆ ‘ಮಾನವ ಅಭಿವೃದ್ಧಿ ಸೂಚ್ಯಂಕ’ ನಿರಾಶೆ ಹುಟ್ಟಿಸುವಂತಿದ್ದರೂ, ಈ ಅಧ್ಯಯನದಲ್ಲಿ ಕೆಲವು ಆಶಾದಾಯಕ ಅಂಶಗಳೂ ಇವೆ. ಅವುಗಳಲ್ಲಿ ಮುಖ್ಯವಾದುದು, 1990ರ ಅವಧಿಯಲ್ಲಿ ಮಾನವ ಅಭಿವೃದ್ಧಿಯಲ್ಲಿ ಕನಿಷ್ಠ ಸಾಧನೆ ಮಾಡಿದ್ದ ದೇಶ ಈಗ ‘ಮಧ್ಯಮ’ ಹಂತದ ಸಾಧನೆಗೆ ತಲುಪಿರುವುದು. ಕಳೆದ 25 ವರ್ಷಗಳಲ್ಲಿ ಭಾರತೀಯರ ಸರಾಸರಿ ಜೀವಿತಾವಧಿ, ತಲಾದಾಯದಲ್ಲಿನ ಹೆಚ್ಚಳ ಹಾಗೂ ಶೈಕ್ಷಣಿಕ ಸಾಧನೆಯಲ್ಲಿ ಉಂಟಾಗಿರುವ ಏರುಗತಿಯೇ ಇದಕ್ಕೆ ಕಾರಣ. 1990ರಲ್ಲಿ 58 ವರ್ಷಗಳಷ್ಟಿದ್ದ ಜೀವಿತಾವಧಿಯ ಸರಾಸರಿ ವಯಸ್ಸು ಈಗ 68.3ಕ್ಕೆ ಮುಟ್ಟಿದೆ. ಹಾಗೆಂದು ಇದು ಗಮನಾರ್ಹ ಸಾಧನೆಯೇನೂ ಅಲ್ಲ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ತಾರತಮ್ಯಗಳು, ಆಹಾರ ಹಾಗೂ ಜೀವನಮಟ್ಟದಲ್ಲಿನ ಅಸಮಾನತೆಗಳು ದೇಶದಲ್ಲಿ ಇನ್ನೂ ಜೀವಂತವಾಗಿವೆ. ಈ ತರತಮಗಳೇ ಮಾನವ ಅಭಿವೃದ್ಧಿಗೆ ತೊಡಕಾಗಿ ಪರಿಣಮಿಸಿರುವುದನ್ನು ಅಧ್ಯಯನ ದಾಖಲಿಸಿದೆ. ಅಭಿವೃದ್ಧಿಯಲ್ಲಿನ ಅಸಮಾನತೆಯನ್ನು ನಿವಾರಿಸುವ ನಿಟ್ಟಿನಲ್ಲಿ ಭಾರತದಲ್ಲಿ ಇತ್ತೀಚಿನ ವರ್ಷಗಳಲ್ಲಿ ಕೈಗೊಂಡಿರುವ ಯೋಜನೆಗಳು ಫಲಕಾರಿಯಾಗಬಹುದೆಂದು ಭಾವಿಸಲಾಗಿದೆ. 2030ರ ವೇಳೆಗೆ ಅಭಿವೃದ್ಧಿ ಹೊಂದಿದ ದೇಶವಾಗಿ ಗುರ್ತಿಸಿಕೊಳ್ಳಲು ಹವಣಿಸುತ್ತಿರುವ ಭಾರತಕ್ಕೆ ‘ಮೇಕ್ ಇನ್ ಇಂಡಿಯಾ’, ‘ಡಿಜಿಟಲ್ ಇಂಡಿಯಾ’, ‘ಬೇಟಿ ಬಚಾವೊ ಬೇಟಿ ಪಡಾವೊ’ ರೀತಿಯ ಆಂದೋಲನಗಳು ನೆರವಾಗಬಹುದೆಂದು ನಿರೀಕ್ಷಿಸಲಾಗಿದೆ.

ಸಾಮಾಜಿಕ ಅನಭಿವೃದ್ಧಿಯ ಆತಂಕ ಭಾರತಕ್ಕೆ ಸೀಮಿತವಾದುದೇನೂ ಅಲ್ಲ. ಅಭಿವೃದ್ಧಿಶೀಲ ದೇಶಗಳಲ್ಲಿನ ಸುಮಾರು 150 ಕೋಟಿ ಜನ ಬಡತನದ ದವಡೆಗೆ ಸಿಲುಕಿದ್ದು, ಇವರಲ್ಲಿ 80 ಕೋಟಿ ಜನರು ದಕ್ಷಿಣ ಏಷ್ಯಾದಲ್ಲಿಯೇ ಇರುವುದಾಗಿ ಅಧ್ಯಯನ ಹೇಳಿದೆ. ಸಾಮಾನ್ಯವಾಗಿ ಎಲ್ಲ ದೇಶಗಳಲ್ಲೂ ಸವಲತ್ತುಗಳ ಹಂಚಿಕೆಯಲ್ಲಿ ಅಸಮಾನತೆ ಇದ್ದು, ಇದರ ಪರಿಣಾಮವನ್ನು ಹೆಣ್ಣುಮಕ್ಕಳು, ವಲಸಿಗರು, ನಿರಾಶ್ರಿತರು, ಅಲ್ಪಸಂಖ್ಯಾತರು ಎದುರಿಸುತ್ತಿದ್ದಾರೆ.

ಸಾಮಾನ್ಯವಾಗಿ ಆರ್ಥಿಕತೆಯ ಹಿನ್ನೆಲೆಯಲ್ಲಿ ದೇಶವೊಂದರ ಪ್ರಗತಿಯನ್ನು ನಿರ್ಣಯಿಸಲಾಗುತ್ತದೆ. ಆದರೆ, ಸಾಮಾಜಿಕ ಅಭಿವೃದ್ಧಿಯನ್ನು ಅಳೆಯಲು ಬಳಸುವ ಮಾನದಂಡಗಳು ಹೆಚ್ಚು ವ್ಯಾಪಕವಾದವು. ಆರೋಗ್ಯ ಹಾಗೂ ಜೀವಿತಾವಧಿಯಲ್ಲಿನ ಹೆಚ್ಚಳ, ಶಿಕ್ಷಣ ಮತ್ತು ತಲಾದಾಯ – ಈ ಮೂರು ಕ್ಷೇತ್ರಗಳಲ್ಲಿನ ಸಾಧನೆಯ ಹಿನ್ನೆಲೆಯಲ್ಲಿ ‘ಮಾನವ ಅಭಿವೃದ್ಧಿ ಸೂಚ್ಯಂಕ’ ರೂಪುಗೊಳ್ಳುತ್ತದೆ. ಈ ಮೂರೂ ಕ್ಷೇತ್ರಗಳಲ್ಲಿ ನಮ್ಮ ಸಾಧನೆ ಗಮನಾರ್ಹವೇನೂ ಆಗಿಲ್ಲ. ಆರೋಗ್ಯ ಯೋಜನೆಗಳನ್ನು ಈಗಲೂ ದೇಶದ ಎಲ್ಲ ಭಾಗಗಳಿಗೂ ತಲುಪಿಸುವುದು ಸಾಧ್ಯವಾಗಿಲ್ಲ. ಲಕ್ಷಾಂತರ ಮಕ್ಕಳು ಶಾಲೆಗಳಿಂದ ಹೊರಗುಳಿದು ಬೀದಿಗಳಲ್ಲಿದ್ದಾರೆ. ಮಾನವ ಹಕ್ಕುಗಳ ತಿಳಿವಳಿಕೆ, ಮಹಿಳೆ ಮತ್ತು ಹಕ್ಕುಗಳ ಪಾಲನೆ, ಮಹಿಳಾ ಸಬಲೀಕರಣ, ಅಲ್ಪಸಂಖ್ಯಾತರ ಸುರಕ್ಷತೆ – ಈ ಕ್ಷೇತ್ರಗಳಲ್ಲಿನ ಕೊರತೆಗಳು ಕೂಡ ಶಿಕ್ಷಣದ ಅರಿವಿನ ರೂಪಗಳೇ ಆಗಿವೆ. ಅಪೌಷ್ಟಿಕತೆಯಿಂದ ಬಳಲುವ ಮಕ್ಕಳು ಹಾಗೂ ತಾಯಂದಿರು ಈಗಲೂ ನಮ್ಮ ನಡುವೆ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಹೊಸ ಉದ್ಯೋಗಾವಕಾಶಗಳ ಸೃಷ್ಟಿಯ ನಡುವೆಯೂ ಕೋಟ್ಯಂತರ ಯುವಕರು ನಿರುದ್ಯೋಗಿಗಳಾಗಿ ಉಳಿದಿದ್ದಾರೆ. ಆರ್ಥಿಕ ಅಭಿವೃದ್ಧಿ ಕೂಡ ಪ್ರದೇಶವಾರು ಹಾಗೂ ರಾಜ್ಯವಾರು ಏರಿಳಿತಗಳಿಂದ ಕೂಡಿದೆ. ಇವೆಲ್ಲವೂ ಸೇರಿಕೊಂಡೇ ‘ಮಾನವ ಅಭಿವೃದ್ಧಿ ಕ್ರಮಾಂಕ’ದಲ್ಲಿ ದೇಶದ ಹಿನ್ನಡೆಗೆ ಕಾರಣವಾಗಿದೆ. ತಳಮಟ್ಟದ ಪ್ರಾಮಾಣಿಕ ಯೋಜನೆಗಳು ಈ ಹೊತ್ತಿನ ಅನಿವಾರ್ಯವಾಗಿದ್ದು, ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಲು ‘ಮಾನವ ಅಭಿವೃದ್ಧಿ ಸೂಚ್ಯಂಕ ಪಟ್ಟಿ’ ಪ್ರೇರಣೆಯಂತಿದೆ.

■ ರಘುನಾಥ ಚ.ಹ.

